KACM210003312019

EX/12/2019

**S.M KANTHARAJU Vs. G.S MALLESHAPPA**

## ಮಧ್ಯಂತರ ಅರ್ಜಿ 2 ರ ಮೇಲೆ ಆದೇಶ

ಡಿಕ್ರಿದಾರರು ದಿವಾಣಿ ಪ್ರಕ್ರಿಯ ಸಂಹಿತೆ ಕಲಂ 151 ರಡಿಯಲ್ಲಿ ಪ್ರಸ್ತುತ ಅರ್ಜಿ ಸಲ್ಲಿಸಿ ಸಹಾಯಕ ನಿರ್ದೇಶಕರು ಭೂ ದಾಖಲೆಗಳು, ಕಡೂರು ರವರಿಗೆ ಡಿಕ್ರಿ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ 11E ಸ್ಕೇಚ್ ಮತ್ತು ವರದಿಯನ್ನು ನ್ಯಾಯಲಯಕ್ಕೆ ಸಲ್ಲಿಸುವಂತೆ ನಿರ್ದೇಶಿಸಬೇಕೆಂದು ಕೋರಿರುತ್ತಾರೆ.

2. ತಮ್ಮ ಅರ್ಜಿಯ ಲಗತ್ತು ಪ್ರಮಾಣ ಪತ್ರದಲ್ಲಿ ಸದರಿ ಡಿಕ್ರಿದಾರರು ಕ್ರಯ ಕರಾರಿನ ಆಧಾರದಡಿ , ನಿರ್ದಿಷ್ಟ ಪರಿಹಾರಕ್ಕಾಗಿ ದಾವೆಯನ್ನು ಸಲ್ಲಿಸಿ, ದಾವೆಯ ದಿನಾಂಕ 24.03.2018 ರಂದು ರಾಜಿಯ ಮೂಲಕ ಇತ್ಯರ್ಥಪಡಿಸಿಕೊಂಡಿರುತ್ತಾರೆ. ರಾಜಿಯಾದ ಪ್ರಕಾರ ರಾಜಿ ದಿನಾಂಕದಿಂದ 30 ದಿನಗಳೊಳಗಾಗಿ ತೀರ್ಪುಋಣಿದಾರರು ಇಲ್ಲಿಯವರೆಗೂ ನೊಂದಾಯಿತ ಕ್ರಯಪತ್ರವನ್ನು ಬರೆದು ಕೊಟ್ಟಿರುವುದಿಲ್ಲ ತೀರ್ಪುಋಣಿದಾರರಿಂದ ನೊಂದಾಯಿತ ಕ್ರಯಪತ್ರವನ್ನು ಬರೆಯಿಸಿಕೊಳ್ಳಲು ಮುಂಚೆ11E ಸ್ಕೇಚ್ ಪಡೆದುಕೊಳ್ಳವುದು ಅವಶ್ಯಕವಾಗಿರುತ್ತದೆ. ಆದ್ದರಿಂದ, ಸಹಾಯಕ ನಿರ್ದೇಶಕರು ಭೂ ದಾಖಲೆಗಳು, ಕಡೂರು ರವರಿಗೆ 11E ಸ್ಕೇಚ್ ನೀಡಲು ನಿರ್ದೇಶಿಸಬೇಕೆಂದು ಕೋರಿರುತ್ತಾರೆ.

3. ಡಿಕ್ರಿದಾರರ ಪರ ವಾದ ಕೇಳಲಾಯಿತು. ತೀರ್ಪುಋಣಿದಾರರು ತಕರಾರನ್ನು ಸಲ್ಲಿಸಿರುವುದಿಲ್ಲ ಮತ್ತು ಅವರು ಏಕಪಕ್ಷಿಯಾಗಿರುತ್ತಾರೆ. ನ್ಯಾಯಲಯದ ಮುಂದಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು.

4. ಪ್ರಸ್ತುತ ಅಮಲ್ ಜಾರಿ ಅರ್ಜಿಯ ಅಸಲು ದಾವೆ ಸಂಖ್ಯೆ 120/2018 ರಿಂದ ಉದ್ಭವವಾಗಿರುತ್ತದೆ. ಸದರಿ ದಾವೆಯು ದಿನಾಂಕ 05.03.2018 ರಂದು ರಾಜಿ ಮೂಲಕ ಇತ್ಯರ್ಥವಾಗಿರುತ್ತದೆ. ಆದಾಗ್ಯೂ ಸಹ, ಇಲ್ಲಿಯವರೆಗೂ ತೀರ್ಪುಋಣಿದಾರರು ನೊಂದಾಯಿತ ಕ್ರಯಪತ್ರವನ್ನು ಡಿಕ್ರಿದಾರರಿಗೆ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಬರೆದುಕೊಟ್ಟಿರುವುದಿಲ್ಲ. ಸದರಿ ದಾವೆಯು ರಾಜಿ ಮೂಲಕ ವಿಲೇಯಾಗಿರುವುದರಿಂದ, ಮತ್ತು ಈ ಮೇಲೆ ಹೇಳಲಾದ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು ನಿರ್ದೇಶಕರು, ಭೂ ದಾಖಲೆಗಳು, ಕಡುರು ರವರಿಗೆ ನಿರ್ದೇಶನ ಕೊಟ್ಟು ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ಡಿಕ್ರಿದಾರರಿಗೆ11E ಸ್ಕೇಚನ್ನ ನೀಡುವಂತೆ ನಿರ್ದೇಶನ ನೀಡುವುದು ನ್ಯಾಯ ಸಮ್ಮತವಾಗಿರುತ್ತದೆಂದು ಭಾವಿಸಿ, ಈ ಕೆಳಕಂಡಂತೆ ಆದೇಶಃ

<u>ಆದೇಶ</u>

ಡಿಕ್ರಿದಾರರು ದಿವಾಣಿ ಪ್ರಕ್ರಿಯಾ ಸಂಹಿತೆಯ ಕಲಂ151 ರಡಿ ಸಲ್ಲಿಸಿದ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಸಹಾಯಕ ನಿರ್ದೇಶಕರು, ಭೂ ದಾಖಲೆಗಳು, ಕಡೂರು ರವರಿಗೆ ಈ ಮೂಲಕ ನಿರ್ದೇಶಿಸುವುದೇನೆಂದರೆ, ಡಿಕ್ರಿ ಅನುಸೂಚಿತ ಸ್ವತ್ತಿಗೆ ಸಂಬಂಧಪಟ್ಟಂತೆ ಡಿಕ್ರಿದಾರರಿಗೆ 11E ಸ್ಕೇಚ್ ನೀಡಬೇಕೆಂದು ಆದೇಶಿಸಲಾಗಿದೆ.

ಡಿಕ್ರಿದಾರರು ಸದರಿ 11E ಈ ಸ್ಕೇಚ್ ನ್ನು ಪಡೆದುಕೊಳ್ಳಲು ತಗಲುವ ವೆಚ್ಚವನ್ನು ಭರಿಸತಕ್ಕದ್ದು.

ಸಹಿ/-

Date : 26-09-2022

(<u>SAVITHARANI H V</u>)
III ADDL CIVIL JUDGE AND JMFC
Kadur,CHIKKAMAGALURU

Visit **ecourts.gov.in** for updates or download mobile app "**eCourts Services**" from Android or iOS